514(950) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಸರ್ಕಾರ ಸುವರ್ಣ ಗ್ರಾಮೋದಯ ಯೋಜನೆಯನ್ನು ಘೋಷಿಸಿದೆಯೇ, ಇದರ ಸೂತ್ರವೇನು,

ಆ) ಬೆಳಗಾಂ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯನ್ನೊಳಗೊಂಡಂತೆ ಉಚ್ಚಗಾಂವ್ ಮತಕ್ಷೇತ್ರದ ಜನಸಂಖ್ಯೆ ವಿವರ ನೀಡುವುದು,

ಇ) ಉಚ್ಚಗಾಂವ್ ಮತಕ್ಷೇತ್ರದಲ್ಲಿ ಆಯ್ಕೆಯಾದ ಗ್ರಾಮಗಳ ಸಂಖ್ಯೆ ಎಷ್ಟು,

ಈ) ಗ್ರಾಮಗಳ ಆಯ್ಕೆಗೆ ಅಳವಡಿಸಲಾದ ಮಾನದಂಡವೇನು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಹೌದು

ಪ್ರತಿ ವ್ಯಕ್ತಿಗೆ ರೂ 2500 ರಿಂದ 3000ದವರೆಗೆ ಅಂದಾಜಿನ ಅಭಿವೃದ್ಧಿ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಡಾ ಡಿ ಎಂ ನಂಜುಂಡಪ್ಪನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 115, 110, 105 ಮತ್ತು 100 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದೆ ಜನಸಂಖ್ಯೆಗೊಳಪಟ್ಟು ಸಾಮಾನ್ಯವಾಗಿ 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಆ) ಬೆಳಗಾಂ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 3,09,101 ಹಾಗೂ ಉಚ್ಚಗಾಂವ್ ಮತಕ್ಷೇತ್ರದ ಗ್ರಾಮೀಣ ಜನಸಂಖ್ಯೆ 1,06,145

ಇ) ಒಂದು

ಈ) ಪ್ರಶ್ನೆ (ಅ)ಕ್ಕೆ ನೀಡಿದ ಉತ್ತರವೇ ಅನ್ವಯಿಸುತ್ತದೆ

515(569) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಾಬಾದ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯ ಕಾಮಗಾರಿ ಕೆಲಸ ಯಾವಾಗ ಪ್ರಾರಂಭವಾಯಿತು ಹಾಗೂ ಇದುವರೆವಿಗೂ ಇದಕ್ಕೆ ತಗಲಿರುವ ವೆಚ್ಚ ಎಷ್ಟು,

ಆ) ಕಾರಂಜಾ ಯೋಜನೆಯ ಕಾಮಗಾರಿ ಕೆಲವು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಆಶ್ವಾಸನೆ ನೀಡಲಾಗಿದೆಯೇ,

ಇ) ನೀಡಿದಲ್ಲಿ, ಕಾಮಗಾರಿ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು,

ಈ) ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ ಸಂಗೊಳಗಿಯಿಂದ ಪಾತರಪಳ್ಳಿ ಏತ ನೀರಾವರಿ ಕೆಲಸ ಕಾರ್ಯವು ಸ್ಥಗಿತಗೊಳಿಸಲಾಗಿದೆಯೆ, ಕಾಮಗಾರಿ ಸ್ಥಗಿತಗೊಂಡಿದ್ದರೆ ಕಾರಣಗಳೇನು,

ಉ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗು ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಕಾರಂಜಾ ಯೋಜನೆಯ ಕಾಮಗಾರಿ ಕೆಲಸ 1970–71ರಲ್ಲಿ ಪ್ರಾರಂಭವಾಗಿದ್ದು ಡಿಸೆಂಬರ್ 2006ರ ವರೆಗೆ ರೂ 450 00 ಕೋಟಿ ರೂ ಗಳು ವೆಚ್ಚವಾಗಿರುತ್ತದೆ

ಆ) ಕಾರಂಜಾ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2007ರ ಅವಧಿಗೆ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ

ಇ) ಕಾರಂಜಾ ಯೋಜನೆಯ ಅಣೆಕಟ್ಟು ಮತ್ತು 31 ಕಿ ಮೀ ಉದ್ದದ ಎಡದಂಡೆ ಕಾಲುವೆಯ ಹಾಗೂ ಅದರ 8 6 ಕಿ ಮೀ ತುದಿ ವಿತರಣಾ ಕಾಲುವೆ ಪೂರ್ಣಗೊಂಡಿರುತ್ತವೆ 131 ಕಿ ಮೀ ಉದ್ದದ ಬಲದಂಡೆ ಕಾಲುವೆಯಲ್ಲಿ 124ರ ಕಿ ಮೀ ಗಳು ಪೂರ್ಣಗೊಂಡಿದ್ದು, ಉಳಿದ 7 ಕಿ ಮೀ ಕಾಮಗಾರಿಗಳನ್ನು